2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ಸಿ.ಇ.ಟಿ. ಗೊಂದಲದ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 60ರ ಅಡಿಯಲ್ಲಿ, ಇವತ್ತು ಸಿ.ಇ.ಟಿ. ಸೀಟಿನ ವಿಚಾರವನ್ನು ಪ್ರಸ್ತಾಪ ಮಾಡಲು ತಮಗೆ ಸೂಚನೆಯನ್ನು ಕಳುಹಿಸಿದ್ದೇವೆ. ತಾವು ದಯಮಾಡಿ ಅದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರದ ನಂತರ, ಈ ವಿಚಾರವನ್ನು ತಾವು ಪ್ರಸ್ತಾಪ ಮಾಡಬಹುದು, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

†**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ನಾವು ನಿನ್ನೆ ದಿವಸ ಯಾವ ಕಾರಣಕ್ಕೂ ಪ್ರಶ್ನೋತ್ತರವನ್ನು ತಡೆಯುವುದಿಲ್ಲವೆಂದು ಒಪ್ಪಿಕೊಂಡಿದ್ದೇವೆ. ಆದರೆ ಆದ್ಯತೆಯ ಮೇಲೆ, ಸಿ.ಇ.ಟಿ. ಗೊಂದಲದಿಂದ ಮಕ್ಕಳು, ಮತ್ತು ಪೋಷಕರು ಕಣ್ಣೀರು ಇಡುತ್ತಿದ್ದಾರೆ, ಬಡ ಮಕ್ಕಳು ಇನ್ನು ಮುಂದೆ ಇಂಜಿನಿಯರಿಂಗ್ ಮೆಡಿಕಲ್ ಕಾಲೇಜ್ ಮರೆಯುವಂತಹ ಸ್ಥಿತಿ ಬಂದಿದೆ, ಅದಕ್ಕೆ ರಕ್ಷಣೆ ಕೊಡುವಂತಹ ಕೆಲಸವನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಮಾಡಬೇಕಾಗಿದೆ, ಈಗ ಶಿಕ್ಷಣ ಒಂದು ವ್ಯಾಪಾರ ಕೇಂದ್ರವಾಗಿದೆ. ಈಗಾಗಲೇ ಸುಮಾರು 85–90 ಜನರು ಕಟ್ಟುವುದಕ್ಕಾಗುವುದಿಲ್ಲವೆಂದು ವಂಚಿತರಾಗಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸಿ.ಇ.ಟಿ. ಬಗ್ಗೆ ಮಾತನಾಡುವುದಕ್ಕೆ ಸರ್ಕಾರದ ಆಕ್ಷೇಪಣೆ ಏನೂ ಇಲ್ಲ. ಅವರು ಯಾವುದಾದರೂ ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಿ, ಆದರೆ ಈಗ ಪ್ರಶ್ನೋತ್ತರಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ನಾನು ಪ್ರಶ್ನೋತ್ತರದ ಅವಧಿಯಾದ ಮೇಲೆ, ಅದನ್ನು ಪ್ರಸ್ತಾಪ ಮಾಡಿ, ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಸಿಇಟಿ ವಿಚಾರದಲ್ಲಿ ಗೊಂದಲವಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೊಂದಲವಿದೆ, ಇದನ್ನು ಪರಿಹರಿಸಬೇಕು. ಇದಕ್ಕೆ ಮಾನ್ಯ ಸದಸ್ಯರುಗಳ ಸಲಹೆಗಳು ಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಪ್ರಶ್ನೋತ್ತರ ಮುಗಿದ ಮೇಲೆ ತಾವು ಪ್ರಸ್ತಾಪ ಮಾಡಿ, ಸರ್ಕಾರವೂ ಸಹ ತಾವು ನೀಡುವ ಸಲಹೆಗಳನ್ನು ಸ್ವಾಗತ ಮಾಡುತ್ತದೆ. ನೀವು ಕೊಡುವಂತಹ ಉಪಯುಕ್ತವಾದಂತಹ ಸಲಹೆಗಳನ್ನು, ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸರ್ಕಾರ, ಮಾನ್ಯ ಮುಖ್ಯಮಂತ್ರಿಯವರು ವಿಶೇಷವಾಗಿ ಸದನದ ಒಳಗಡೆ, ಹೊರಗಡೆ ನಾವು ಏನು ಹೇಳಿದ್ದೇವೆ, ಅದಕ್ಕೆ ನಾವು ಬದ್ಧರಾಗಿದ್ದೇವೆ. ನಿಮ್ಮ ಸಲಹೆಗಳಿಗೆ ಸ್ವಾಗತಾರ್ಹ, ಈಗ ದಯಮಾಡಿ ಪ್ರಶ್ನೋತ್ತರಕ್ಕೆ ಆದ್ಯತೆಯನ್ನು ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ಬಿಗಿದಿಟ್ಟು ಚರ್ಚೆ ಮಾಡತಕ್ಕಂಥ ಪ್ರಮುಖವಾದಂತಹ ವಿಷಯವಾಗಿದೆ.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ಈಗ ಪ್ರಶ್ನೋತ್ತರವಾದ ಮೇಲೆ, ವಿಷಯವನ್ನು ಪ್ರಸ್ತಾಪ ಮಾಡಿ, ಆಗ ನಾನು ಅದನ್ನು ಕನ್ಸಿಡರ್ ಮಾಡುತ್ತೇನೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

3. ಪ್ರಶ್ನೋತ್ತರ

ಅ. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು:

ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಯೋಜನೆಯನ್ನು ರಾಜ್ಯ ಪಾಲಿಟೆಕ್ನಿಕ್‌ಗಳಿಗೆ ಅಳವಡಿಸುವುದು

16 (272) : ಶ್ರೀ ಆಂಜನೇಯ ಹೆಚ್. (ಭರಮಸಾಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (ಎಐಸಿಟಿಇ) ಯೋಜನೆಯನ್ನು ರಾಜ್ಯ ಪಾಲಿಟೆಕ್ನಿಕ್‌ಗಳಿಗೆ ಅಳವಡಿಸಿಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಅದನ್ನು ಜಾರಿಗೆ ತರಲಾಗಿದೆ;

ಆ) ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ಮತ್ತು ಪ್ರಾಂಶುಪಾಲರುಗಳ ಹುದ್ದೆಗಳನ್ನು ತುಂಬಲು ಎಐಸಿಟಿಇ ನಿಯಮಗಳ ಪ್ರಕಾರ ವಿದ್ಯಾ ಅರ್ಹತೆಯನ್ನು ನಿಗದಿಗೊಳಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆಯೇ; ತಂದಿದ್ದಲ್ಲಿ ಪ್ರತಿ ಒದಗಿಸುವುದು;

ಇ) ಎಐಸಿಟಿಇ ನಿಯಮವನ್ನು ಬದಿಗೊತ್ತಿ ಈ ಕೆಳಕಂಡ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಹುದ್ದೆಗಳನ್ನು ತುಂಬುವಲ್ಲಿ ಕೇವಲ ಡಿಪ್ಲೊಮೊ ವಿದ್ಯಾರ್ಹತೆ ಹೊಂದಿರುವವರನ್ನು ಮಾತ್ರ ನೇಮಿಸಿರುವುದು ನಿಜವೇ; 1. ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು. 2. ಸಿ.ಪಿ.ಸಿ. ಪಾಲಿಟೆಕ್ನಿಕ್, ಮೈಸೂರು. 3. ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ, 4. ಡಿ.ಎ.ಸಿ.ಜೆ. ಪಾಲಿಟೆಕ್ನಿಕ್, ಚಿಕ್ಕಮಗಳೂರು 5. ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ. 6. ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು. 7. ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು 8. ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು.

ಈ) ಹಾಗಿದ್ದಲ್ಲಿ, ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಬಿ.ಇ. ಪದವೀಧರರನ್ನು ವಜಾ ಮಾಡಿ ಡಿಪ್ಲೊಮೋಧಾರರನ್ನು ಮಾತ್ರ ನೇಮಕ ಮಾಡಿರುವುದಕ್ಕೆ ಕಾರಣಗಳೇನು;

ಉ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರದಿದ್ದಲ್ಲಿ, ಅದಕ್ಕೆ ಕಾರಣಗಳೇನು: ಈ ತಾರತಮ್ಯವನ್ನು ಸರಿಪಡಿಸಲಾಗುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಹೌದು. ದಿನಾಂಕ: 1-4-93 ರಿಂದ ಜಾರಿಗೆ ತರಲಾಗಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರ ಸಂಯುಕ್ತ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆಯನ್ವಯ ಆಯಾ ಪಾಲಿಟೆಕ್ನಿಕ್‌ಗಳಲ್ಲಿನ ಅತ್ಯಂತ ಹಿರಿಯ ಉಪನ್ಯಾಸಕರನ್ನು ಪ್ರಾಂಶುಪಾಲರ ಪ್ರಭಾರದಲ್ಲಿಡಲಾಗಿದೆ. ಇದು ಕೇವಲ ತಾತ್ಕಾಲಿಕ ವ್ಯವಸ್ಥೆಯಾಗಿದೆ.

ಈ) ಪ್ರಶ್ನೆ (ಇ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.